# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/179/11-12 ದಿನಾಂಕ :21-10-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಬಳ್ಳಾರಿ ರುದ್ರಗೌಡ ತಂದೆ ಈಶ್ವರಪ್ಪ, ಸಾ\|\|ಬಸರಕೋಡು | 1. ತಹಶೀಲ್ದಾರರು, ಬಳ್ಳಾರಿ |
| ಗ್ರಾಮ, ತಾ\|\|ಬಳ್ಳಾರಿ | 2. ಕಂದಾಯ ನಿರೀಕ್ಷಕರು, ಕೋಳೂರು |
| ಶ್ರೀ ಪಿ ಮಲ್ಲಯ್ಯ, ವಕೀಲರು, ಬಳ್ಳಾರಿ | 3. ಗ್ರಾಮ ಲೆಕ್ಕಾಧಿಕಾರಿಗಳು, ಹಿರೇ ಹಡ್ಲಿಗಿ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಹಿರೇಹಡ್ಲಗಿ | 377/A | 0.88 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕೋಳೂರು ಇವರ ಎಂ.ಆರ್ ನಂ 15/2001-02 ದಿನಾಂಕ: 20.09.2001 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 26-08-2011, 03-03-2015, 20-1-2015, ಮತ್ತು 21-10-2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು ದಿನಾಂಕ: 21-10-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಹಿರೇಹಡ್ಲಗಿ ಗ್ರಾಮದ ಸ.ನಂ 377/A ವಿಸ್ತೀರ್ಣ: 0.88 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೋಳೂರು ಇವರ ಎಂ.ಆರ್ ನಂ 15/2001-02 ದಿನಾಂಕ: 20-09-2001 ರ ರನ್ವಯ ಕಂದಾಯ ದಾಖಲೆಗಳಲ್ಲಿ ಹಕ್ಕು ದಾಖಲಿಸುವಂತೆ ಕೋರಿರುತ್ತಾರೆ.

ಮುಂದುವರೆದು ಪ್ರಕರಣವನ್ನು ಪರಿಶೀಲಿಸಲಾಗಿ, ಅಪೀಲುದಾರರು ಸದರಿ ಜಮೀನನ್ನು ನೊಂದಾಯಿತ ಕ್ರಯ ಪತ್ರ 2871/01-02 ದಿನಾಂಕ 20-09-2001 ರಲ್ಲಿ ಉರಿಮುಂದಲ ಮರಿಬಸಪ್ಪ ತಂದೆ ಮರಿಗೌಡ ಇವರಿಂದ ಖರೀದಿಸಿದ್ದು, ಸದರಿ ಕ್ರಯ ಪತ್ರದಂತೆ ಹಕ್ಕು ದಾಖಲೆಯಾಗಿದ್ದು, ಆದರೆ ಪಹಣಿ ಯಲ್ಲಿ ಕ್ರಯದಾರರ ಹೆಸರು ದಾಖಲಾಗಿರುವುದಿಲ್ಲ , ಕಾರಣ ಸದರಿ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.

:: ಆದೇಶ ::

<u>ಮೇಲ್ಮನವಿಯನ್ನು ಬಾಗಶಃ ಪುರಸ್ಕರಿಸಿದೆ:</u>

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಹಿರೇಹಡ್ಲಗಿ ಗ್ರಾಮದ ಸ.ನಂ 377/A ವಿಸ್ತೀರ್ಣ: 0.88 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕ್ರಯ ಪತ್ರದಂತೆ ಹಕ್ಕುದಾಖಲಾಗಿದ್ದು , ಕಂದಾಯ ದಾಖಲೆಯಾದ ಪಹಣಿಯಲ್ಲಿ ಉರಿಮುಂದಲ ಮರಿಬಸಪ್ಪ **ತಂದೆ** ಮರಿಗೌಡ ಹೆಸರನ್ನು ಕಡಿಮೆ ಮಾಡಿ ಖರೀದಿದಾರರ ಹೆಸರನ್ನು ದಾಖಲಿಸಲು ತಹಶೀಲ್ದಾರರು ಬಳ್ಳಾರಿ ಇವರಿಗೆ **ಆದೇಶಿಸಿದೆ.**

ಈ **ಆದೇಶವನ್ನು** ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 21-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,